3. **ಪಶುವೈದ್ಯ ಸಹಾಯಕರು :** ನೇರ ನೇಮಕಾತಿ ಮೂಲಕ 642 ಪಶುವೈದ್ಯ ಸಹಾಯಕರ ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದೆ. ನೇಮಕಾತಿ ಸಂದರ್ಭದಲ್ಲಿ ಬಸವಕಲ್ಯಾಣ ಕ್ಷೇತ್ರದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುವುದು.
4. **ಡಿ ದರ್ಜೆ' ನೌಕರರು :** ಖಾಲಿ ಇರುವ 'ಡಿ ದರ್ಜೆ' ಹುದ್ದೆಗಳನ್ನು ಆದ್ಯತೆ ಮೇರೆಗೆ ಹೊರ ಗುತ್ತಿಗೆ ಮುಖಾಂತರ ತುಂಬಲು ಕ್ರಮ ವಹಿಸಲಾಗುವುದು.

**ಬೀದರ್ ಜಿಲ್ಲೆಯ ಪಶುವೈದ್ಯ ಶಾಲೆಗೆ ಔಷಧಿ ಸರಬರಾಜು ಮಾಡುವ ಬಗ್ಗೆ**

**274 (663) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ)** : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ವಿವಿಧ ಪಶುವೈದ್ಯ ಆಸ್ಪತ್ರೆಗಳು/ಚಿಕಿತ್ಸಾಲಯಗಳಿಗೆ ಎಷ್ಟು ಮೊತ್ತದ ಪಶುವೈದ್ಯ ಔಷಧಿಗಳನ್ನು ಸರಬರಾಜು ಮಾಡಲಾಗಿದೆ (ಆಸ್ಪತ್ರೆವಾರು ವಿವರಗಳನ್ನು ಒದಗಿಸುವುದು);

ಆ) ಜಿಲ್ಲೆಯಲ್ಲಿ ಪಶುವೈದ್ಯ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ, ಮುಂಬರುವ ದಿನಗಳಲ್ಲಿ ಈ ಕೊರತೆಯನ್ನು ನೀಗಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

**ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :**

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಜಿಲ್ಲೆಯ ವಿವಿಧ ಪಶುವೈದ್ಯ ಆಸ್ಪತ್ರೆಗಳು/ ಚಿಕಿತ್ಸಾಲಯಗಳಿಗೆ ಸರಬರಾಜಾದ ಔಷಧಿಗಳ ಮೊತ್ತದ ವಿವರಗಳನ್ನು ಅನುಬಂಧ– 1 ರಲ್ಲಿ ನೀಡಿದೆ.

ಆ) ಸ್ವಲ್ಪ ಮಟ್ಟಿಗೆ ಕೊರತೆ ಇದೆ. ರಾಜ್ಯವಲಯ ಹಾಗೂ ಜಿಲ್ಲಾವಲಯಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಔಷಧಿಗಳನ್ನು ಖರೀದಿಸಿ ಜಿಲ್ಲೆಯ ಎಲ್ಲಾ ಸಂಸ್ಥೆಗಳಿಗೆ ವಿತರಿಸಲಾಗಿದೆ.

ಇ) ಔಷಧಿಗಳನ್ನು ಸರಬರಾಜು ಮಾಡಲು ಅಗತ್ಯ ಕ್ರಮ ವಹಿಸಲಾಗುವುದು.

**ಅನುಬಂಧ – 1**

**ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ.ಬಸವರಾಜ ಪಾಟೀಲ್ ಅಟ್ಟೂರ ರವರ ಪ್ರಶ್ನೆ ಸಂಖ್ಯೆ:663 ಕ್ಕೆ ಮಾಹಿತಿ.**

**ಬೀದರ್ ಜಿಲ್ಲೆಯ ವಿವಿಧ ಪಶುವೈದ್ಯಕೀಯ ಸಂಸ್ಥೆಗಳಿಗೆ ಸರಬರಾಜಾದ ಔಷಧಿಗಳ ಮೊತ್ತ**

| ವರ್ಷ | ಪಶುಆಸ್ಪತ್ರೆ | ಪ.ಚಿ/ಸಂ.ಪ.ಚಿ/ ಪ್ರ.ಗ್ರಾ.ಯೋ | ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ |
|---|---|---|---|
| 2007–08 | 64,150–00 | 47985–00 | 16170–00 |
| 2008–09 | 69140–00 | 51910–00 | 17490–00 |
| 2009–10 | 75160–00 | 56220–00 | 18935–00 |

**ಷರಾ: ಪ.ಚಿ = ಪಶುಚಿಕಿತ್ಸಾಲಯ**
**ಸಂ.ಪ.ಚಿ = ಸಂಚಾರಿ ಪಶುಚಿಕಿತ್ಸಾಲಯ**
**ಪ್ರ.ಗ್ರಾ.ಯೋ= ಪ್ರಧಾನ ಗ್ರಾಮೀಣ ಯೋಜನೆ.**

**ಚಿತ್ರದುರ್ಗದಲ್ಲಿ ಕಲಾ & ವಿಜ್ಞಾನ ವಿಭಾಗದ ಸ್ನಾತಕೊತ್ತರ ಕೇಂದ್ರಕ್ಕೆ ಕಟ್ಟಡದ ಕೊರತೆ**

**276 (694) ಶ್ರೀ ಬಸವರಾಜನ್ ಎಸ್.ಕೆ. (ಚಿತ್ರದುರ್ಗ)** : ಮಾನ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗದಲ್ಲಿ ಇರುವ ಕಲಾ ಮತ್ತು ವಿಜ್ಞಾನ ಎರಡು ವಿಭಾಗಗಳಲ್ಲಿ ಸ್ನಾತಕೋತ್ತರ ಕೇಂದ್ರ ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;